ಶ್ರೀ ಜಿ. ಬಸವಣ್ಣಪ್ಪ.—ಸಮಗ್ರ ಬಾಲವಿಕಾಸ ಯೋಜನೆ ಏನಿದೆ ಇದು ಅತ್ಯುತ್ತಮ ಯೋಜನೆ. ೬ ವರ್ಷದ ಮಕ್ಕಳಿಗೆ ಪೌಷ್ಟಿಕಾಹಾರ ಕೊಡತಕ್ಕದ್ದು, ರೋಗ ನಿರೋಧಕ ಚುಚ್ಚು ಮದ್ದು ಕೊಡತಕ್ಕದ್ದು, ಶಾಲಾಪೂರ್ವ ತರಬೇತಿಯನ್ನು ಕೊಡತಕ್ಕದ್ದು ಈ ಕಾರ್ಯಕ್ರಮದ ಉದ್ದೇಶ. ನ್ಯಾಯವಾಗಿ ಈ ಯೋಜನೆ ಎಲ್ಲಾ ತಾಲೂಕುಗಳಲ್ಲೂ ಜಾರಿಗೆ ಬರಬೇಕು. ಈಗ ಒಟ್ಟು ೯೪ ಪ್ರದೇಶಗಳಲ್ಲಿ ಈ ಪ್ರಾಜೆಕ್ಟ್‌ಗಳಿವೆ. ಇನ್ನೂ ೮೭ ತಾಲೂಕುಗಳಲ್ಲಿ ಇದು ವಿಸ್ತರಣೆ ಆಗಬೇಕಾಗಿದೆ. ಇದನ್ನು ಎಲ್ಲ ತಾಲ್ಲೂಕುಗಳಿಗೂ ವಿಸ್ತರಿಸಬೇಕೆಂಬುದನ್ನು ಈ ಹಿಂದೆಯೇ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಕೂಡ ಒಪ್ಪಿಕೊಂಡಿವೆ. ಈ ವರ್ಷ ೧೪ ತಾಲ್ಲೂಕುಗಳಿಗೆ ಕೊಡುವುದಕ್ಕೆ ಕೇಂದ್ರ ಸರ್ಕಾರ ಒಪ್ಪಿದೆ. ಆದರೆ ಇದಕ್ಕೆ ಕೆಲವು ನಾರಂಸ್ ಇವೆ. ಇದಕ್ಕೆ ಬೇಕಾದ ಸ್ಥಳವನ್ನು ಕೇಂದ್ರ ಸರ್ಕಾರದವರೇ ಗುರುತು ಮಾಡಬೇಕು. ಎಸ್.ಸಿ., ಎಸ್.ಟಿ. ಜನಾಂಗ ಜಾಸ್ತಿ ಇರಬೇಕು, ಬ್ಯಾಕ್‌ವರ್ಡ್ ಕ್ಲಾಸ್ ಜನಾಂಗ ಇರಬೇಕು, ಈ ರೀತಿಯ ಕ್ರೈಟೀರಿಯ ಆಧಾರದ ಮೇಲೆ ಅವರು ಕೊಡುತ್ತಾರೆ. ಈಗಾಗಲೇ ನಾವು ೮೭ ತಾಲೂಕುಗಳ ಚಿತ್ರ ಹಾಗೂ ಸೆನ್ಸಸ್‌ನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅದರಲ್ಲಿ ಹೊನ್ನಾವರ ಬರಬಹುದು, ಸಿರ್ಸಿ, ಸಿದ್ದಾಪುರ ಬರಬಹುದು ಅಥವಾ ಬೇರೆಯದು ಬರಬಹುದು ಅದು ನಮಗೆ ಗೊತ್ತಿಲ್ಲ.

ಶ್ರೀ ಆರ್. ಎನ್. ನಾಯಕ್.—೮೭ ತಾಲ್ಲೂಕುಗಳನ್ನು ಕೇಂದ್ರ ಸರ್ಕಾರಕ್ಕೆ ಏನು ಸೂಚನೆ ಮಾಡಿದ್ದೀರಿ ಅದರಲ್ಲಿ ನಮ್ಮ ಹೊನ್ನಾವರ ತಾಲ್ಲೂಕು ಇದೆಯೆ ಎಂಬುದನ್ನು ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ.—೮೭ ತಾಲ್ಲೂಕುಗಳು ಮಾತ್ರ ಏನು ಉಳಿದಿವೆ ಅವೆಲ್ಲವನ್ನೂ ನಾನು ಚಿತ್ರ ಸಮೇತ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ. ಅಂದಮೇಲೆ ಅದರಲ್ಲಿ ನಿಮ್ಮ ಹೊನ್ನಾವರ ಇದ್ದೇ ಇರುತ್ತದೆ.

COMPLAINTS ABOUT THE BAD WORKING OF THE TAHSILDAR OFFICE AT YADAGIR

895 (2731) SRI MALLIKARJUNA KHARGE(**Gurumttkal**).—Will the honourable Minister for Revenue, Planning, Major and Medium Irrigation be pleased to state;—

(a) Whether the Government has received any complaints about the bad working of the Tahsildar office at Yadagir?

(b) If so, the action taken by the Government in this regard?

SRI S. R. BOMMAI (Minister for Revenue).—

(a) Yes.

(b) The Divisional Commissioner, Gulbarga Division, Gulbarga has been requested to investigate into the allegations and to submit a detailed report to Government for taking further action.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ Whether the Government has received any complaints about the bad working of the Tahsildar office at Yadagir ಎಂದು ಕೇಳಿದ್ದಕ್ಕೆ Yes ಎಂದೂ, ನನ್ನ ಎರಡನೆ ಪ್ರಶ್ನೆ If so, the action taken by the Government in this regard ಎಂದು ಕೇಳಿರುವುದಕ್ಕೆ The Divisional Commissioner, Gulbarga Division, Gulbarga has been requested to investigate into the allegations and to submit a detailed report to Government for taking further action ಅಂಥ ಹೇಳಿದ್ದೀರಿ. ನಾನು ಕೇಳತಕ್ಕಂಥದ್ದು ಇಷ್ಟೇ. ಕಂಪ್ಲೇಂಟ್ ಬಂದಿದ್ದರೆ ಅದು ಯಾವರೀತಿ ಕಂಪ್ಲೇಂಟ್ ಬಂದಿದೆ. ಡಿವಿಷನಲ್ ಕಮಿಷನರ್ ರವರನ್ನು ರಿಪೋರ್ಟ್ ಕೇಳಿದ್ದೇವೆಂದು ಹೇಳಿದ್ದೀರಿ. ನೀವು ಕೇಳುವುದಕ್ಕೆ ಮುಂಚಿತವಾಗಿಯೇ

ಡೆಪ್ಯುಟಿ ಕಮಿಷನರ್‌ರವರು ಸರ್ಕಾರಕ್ಕೆ ಬರೆದು ಈ ತಹಸೀಲ್‌ದಾರ್‌ರವರು ಸರಿಯಿಲ್ಲ. ಅವರ ಮೇಲೆ ಅಲಿಗೇಷನ್ ಇದೆ. ಅದಕ್ಕೆ ಅವರನ್ನು ಬದಲಾವಣೆ ಮಾಡಬೇಕೆಂದು ಅವರು ಬರೆದಿದ್ದಾರೆ. ಅವರು ಬರೆದ ಮೊದಲನೆಯ ಲೆಟರ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಹೇಳಬೇಕು.

ಎರಡನೆಯದಾಗಿ, ಇಡೀ ಕರ್ನಾಟಕ ರಾಜ್ಯದ ಭವಿಷ್ಯದಲ್ಲಿ ೫ ವರ್ಷ ೧೦ ತಿಂಗಳು ಒಂದೇ ಕಡೆ ಇದ್ದ ತಹಸೀಲ್ದಾರ್ ಎಂದರೆ ಅವರೊಬ್ಬರೇ. ಇದರಲ್ಲಿ ರಾಜಕೀಯ ಬೆಂಬಲವಿದೆಯೋ ಏನೋ ಗೊತ್ತಿಲ್ಲ. ಇಷ್ಟು ಅಲಿಗೇಷನ್ ಇದ್ದರೂ ಕೂಡ ಡೆಪ್ಯುಟಿ ಕಮಿಷನರ್‌ರವರು ಬರೆದರೂ ಕೂಡ ಒಂದೇ ಕಡೆ ಇರಬೇಕೆಂದರೆ ಅದಕ್ಕೆ ಕಾರಣವೇನು ದಯವಿಟ್ಟು ತಿಳಿಸಬೇಕು?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಅವರನ್ನು ಟ್ರಾನ್ಸ್‌ಫರ್ ಮಾಡಿದ್ದೇವೆ. ೧೦ನೇ ಜೂನ್ ೧೯೮೮ ರಂದು ಸರ್ಕಾರದವರು ಅವರ ಬಗ್ಗೆ ಎನ್‌ಕ್ವೈರಿ ಮಾಡಿ ರಿಪೋರ್ಟ್‌ನ್ನು ತೆಗೆದುಕೊಳ್ಳಬೇಕೆಂದು ಕಳುಹಿಸಿಕೊಟ್ಟಿದ್ದೇವೆ. ಅದು ಬಂದ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ನಮಗೆ ಬಂದಿರುವ ಇನ್‌ಫರ್‌ಮೇಷನ್ ಪ್ರಕಾರ ಅವರು ೫ ವರ್ಷ ೧೦ ತಿಂಗಳು ಲ್ಯಾಂಡ್ ರಿಫಾರ್ಮ್ಸ್ ಸ್ಪೆಷಲ್ ತಹಸೀಲ್ದಾರರಾಗಿದ್ದರು. ಆಮೇಲೆ ರೆಗ್ಯೂಲರ್ ತಹಸೀಲ್ದಾರ್‌ರಾಗಿದ್ದರು. ಈಗ ಟ್ರಾನ್ಸ್‌ಫರ್ ಆಗಿದೆ, ಇದರಲ್ಲಿ ರಾಜಕೀಯ ಹಸ್ತಕ್ಷೇಪವೇನೂ ಇಲ್ಲ. ಅವರಲ್ಲಿ ತಪ್ಪಿದ್ದರೆ ಉಗ್ರಶಿಕ್ಷೆಗೆ ಒಳಪಡಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಟ್ರಾನ್ಸ್‌ಫರ್ ಮಾಡಿ, ಬೇರೆ ಕಡೆ ಕಳುಹಿಸಿ ಕೊಡಿ. ಅದರ ಬಗ್ಗೆ ನಮಗೇನೂ ಇಂಟರೆಸ್ಟ್ ಇಲ್ಲ. ಅಲಿಗೇಷನ್ ಏನು ಬಂದಿದೆ ಅವರ ಮೇಲೆ ಅದರ ಬಗ್ಗೆ ಆಗಲೇ ಡೆಪ್ಯುಟಿ ಕಮಿಷನರ್ ರಿಪೋರ್ಟ್ ಕಳುಹಿಸಿಕೊಟ್ಟಿದ್ದಾರೆ. ೮ನೇ ಜೂನ್ ೧೯೮೮ಕ್ಕೆ ಮುಂಚೆ ಮೊದಲಿದ್ದ ಡೆಪ್ಯುಟಿ ಕಮಿಷನರ್ ಶ್ರೀಮಾನ್ ಗೋರೆ ಅವರು ಇಂಥ ಆಫೀಸರ್‌ನ್ನು ನಾವು ನೋಡಿಯೇ ಇಲ್ಲವೆಂದು ಬರೆದ ತಕ್ಷಣ ಇವರನ್ನು ಬದಲಾವಣೆಮಾಡಿ ಬೇರೆಯವರನ್ನು ಹಾಕಬೇಕಾಗಿತ್ತು. ಅವರು ಬರೆದ ಮೇಲೆ ನಾವು ಪ್ರಶ್ನೆ ಹಾಕುವುದು ಸರಿಯಲ್ಲದಿದ್ದರೂ ತಮ್ಮ ಗಮನಕ್ಕೆ ತಂದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ. ದಯವಿಟ್ಟು ಇಂಥವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ಕಾನೂನು ವಿರುದ್ಧ ಏನೂ ಕೆಲಸ ಮಾಡಬಾರದು, ಲಂಚ ತೆಗೆದುಕೊಳ್ಳಬಾರದು ಎನ್ನುವ ಭೀತಿ, ಭಯ ಹೊರಟು ಹೋಗುತ್ತದೆ. ಅವರ ಮೇಲೆ ಆಕ್ಷನ್ ತೆಗೆದುಕೊಳ್ಳದೇ ಹೋದರೆ ಎನ್‌ಕ್ವೈರಿ ಹಾಗೆಯೇ ಮುಚ್ಚಿ ಹೋಗುತ್ತದೆ. ಹೊರಟು ಹೋದ ಬಿಟ್ಟುಬಿಡಿ ಎಂದಂತಾಗುತ್ತದೆ. ದಯವಿಟ್ಟು ಪೆಂಡಿಂಗ್ ಎನ್‌ಕ್ವೈರಿ ಎಂದು ಸಸ್‌ಪೆಂಡ್‌ನಲ್ಲಿ ಇಡಿ. ಹಿಂದಿದ್ದ ಡೆಪ್ಯುಟಿ ಕಮಿಷನರ್‌ರವರನ್ನು ಮತ್ತು ಡಿವಿಜನಲ್ ಕಮಿಷನರ್‌ರವರನ್ನು ಕೇಳಿ. ಸಿ.ಓ.ಡಿ. ಕಳುಹಿಸಿ ರಿಪೋರ್ಟ್‌ನ್ನು ತರಿಸಿಕೊಂಡು ದಯವಿಟ್ಟು ಅಂಥವರಿಗೆ ಶಿಕ್ಷೆಯನ್ನು ಕೊಡಬೇಕು. You should suspend him pending enquiry. That will give some relief to the people.

ಶ್ರೀ ಎಸ್. ಆರ್. ಬೊಮ್ಮಾಯಿ.—ರಿಪೋರ್ಟ್ ಕೇಳಿದ್ದೇವೆ. ರಿಪೋರ್ಟ್ ಬಂದಮೇಲೆ ಸಸ್‌ಪೆಂಡ್ ಮಾಡುತ್ತೇವೆ, ಅಗತ್ಯವಾದರೆ ಡಿಸ್‌ಮಿಸ್ ಮಾಡುತ್ತೇವೆ. ರಿಪೋರ್ಟ್‌ಗಾಗಿ ಕಾಯುತ್ತಿದ್ದೇವೆ.

ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸುವ ಕುರಿತು

೮೯೬(೧೯೮೭) ಶ್ರೀಮತಿ ಮನೋರಮ ಮದ್ವರಾಜ್ (ಉಡುಪಿ).—ಮಾನ್ಯ ಕಂದಾಯ, ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಜಮೀನುಗಳು ಕೃಷಿ ಜಮೀನುಗಳೆಂದು ವರ್ಗೀಕೃತವಾಗಿರುವುದು ನಿಜವೇ?

ಆ) ಮನೆ ಕಟ್ಟಲು ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಿಕೊಳ್ಳಲು ಜನತೆ ತೀವ್ರತರ ತೊಂದರೆ ಅನುಭವಿಸುತ್ತಿದ್ದಾರೆ ಎಂಬ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?